# ಜಿಲ್ಲಾ ಪಂಚಾಯತ್ ಉಡುಪಿ

**ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ರಜತಾದ್ರಿ ಮಣಿಪಾಲ-576104, ಉಡುಪಿ ಜಿಲ್ಲೆ**

**ದೂರವಾಣಿ ಸಂಖ್ಯೆ :0820 2574878** **e-mail ID :ddpi.edu.karudp@nic.in**


ಸಂಖ್ಯೆ:ಡಿ1/ಸ್ವಭಾ.ಮಿ/2017-18 ದಿನಾಂಕ : 20.06.2017

## ಜ್ಞಾಪನಾ

ವಿಷಯ: ಪ್ರೌಢಶಾಲೆಗಳು ಹಾಗೂ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯ 8 ರಿಂದ 10ನೆಯ ತರಗತಿಯಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಭಾಗ ಬಿ ಮೌಲ್ಯಮಾಪನದಲ್ಲಿ ಕಸ ವಿಂಗಡನೆ, ವೈಯಕ್ತಿಕ ಸ್ವಚ್ಛತೆ ಹಾಗೂ ತ್ಯಾಜ್ಯ ವಿಲೇವಾರಿಯನ್ನು ಒಂದು ಚಟುವಟಿಕೆಯಾಗಿ ಪರಿಗಣಿಸುವ ಬಗ್ಗೆ

ಉಲ್ಲೇಖ: 1. ಈ ಕಛೇರಿ ಪತ್ರ ಸಂ:ಡಿ1. ಸ್ವಭಾ.ಮಿ/2017-18 ದಿನಾಂಕ:01.06.2017

2. ಜಿಲ್ಲಾ ಪಂಚಾಯತ್ ಉಡುಪಿ ಇವರ ಪತ್ರ ಸಂ: ಜಿ.ಪಂ.ಉ/ಅಭಿ ಸ್ವಬಾ.ಮಿ/ ಸಿ.ಆರ್/ 2017-18 ದಿನಾಂಕ: 06.06.2017

****************

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1) ರಲ್ಲಿ ಸರಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಕಸ ವಿಂಗಡಣೆಯನ್ನು ಮೊದಲನೆಯ ಅರ್ಧವಾರ್ಷಿಕ ಅವಧಿಯ ಭಾಗ ಬಿ ಯ ಮೌಲ್ಯಮಾಪನದಲ್ಲಿ ಸೇರಿಸುವಂತೆ ಸೂಚಿಸಲಾಗಿತ್ತು. ಇದನ್ನು ಎಲ್ಲಾ ಸರ್ಕಾರಿ, ಅನುದಾನಿತ, ಅನುದಾನರಹಿತ ಶಾಲೆಗಳು ಮತ್ತು ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 8 ರಿಂದ 10ನೆಯ ತರಗತಿಯಲ್ಲಿ ಅಭ್ಯಾಸ ಮಾಡುತ್ತಿರುವ ಶಾಲೆಗಳಿಗೆ ವಿಸ್ತರಿಸಿದೆ. ಇವುಗಳಲ್ಲಿ 'ಭಾಗ ಬಿ' ಯ ದೈಹಿಕ ಮತ್ತು ಆರೋಗ್ಯ ಶಿಕ್ಷಣ, ಸಾಮಾಜಿಕ ಉಪಯುಕ್ತ ಉತ್ಪಾದನಾ ಕಾರ್ಯ ಮತ್ತು ಮೌಲ್ಯಗಳು, ವೈಯಕ್ತಿಕ ಮತ್ತು ಸಾಮಾಜಿಕ ಬೆಳವಣಿಗೆಯಡಿ ಮೂರು ವಿಭಾಗಗಳಲ್ಲಿ ನಡೆಸಬೇಕು.

1. ಮೌಲ್ಯಗಳು ವೈಯಕ್ತಿಕ ಮತ್ತು ಸಾಮಾಜಿಕ ಬೆಳವಣಿಗೆ:

   ಇದಕ್ಕೆ ಈಗಾಗಲೇ ಜಿಲ್ಲಾ ಪಂಚಾಯತ್ ಉಡುಪಿ ಇವರು ಮುದ್ರಿಸಿ ಸರಬರಾಜು ಮಾಡಿದ ಸ್ವಚ್ಛತಾ ದಿನಚರಿಯನ್ನು ಮೂಲ ಪಠ್ಯವಾಗಿ ಬಳಸುವುದು. ಇದರಲ್ಲಿನ ಪ್ರತೀ ವಿಷಯವನ್ನು 20 ದಿನ ಚಟುವಟಿಕೆ ನಡೆಸಿ ಅಂತ್ಯದಲ್ಲಿ ಒಂದು 20 ಅಂಕಗಳ ಲಿಖಿತ ಪರೀಕ್ಷೆ ನಡೆಸುವುದು. ಇದರಲ್ಲಿ 0-10 (ಸಿ ಶ್ರೇಣಿ), 11-15 (ಬಿ ಶ್ರೇಣಿ), 16-20 (ಎ ಶ್ರೇಣಿ) ನೀಡುವುದು.

   ದೈನಂದಿನ ಅಭ್ಯಾಸಗಳಾದ ಉಗುರು ಕತ್ತರಿಸುವುದು, ತಲೆ ಬಾಚುವುದು, ಶೂ/ಚಪ್ಪಲಿ ಧರಿಸುವುದು/ಓರಣವಾಗಿ ಜೋಡಿಸುವುದು, ಊಟಕ್ಕೆ ಮುನ್ನ ಕೈ ತೊಳೆಯುವುದು, ಶೌಚಾಲಯಗಳ ಬಳಕೆ ಮತ್ತು ನಿರ್ವಹಣೆಯನ್ನು ಪರಿಶೀಲಿಸಲು ಸಾಂದರ್ಭಿಕ ವಹಿ (Anecdotal record) ನಿರ್ವಹಿಸುವುದು. ಇದಕ್ಕೆ ತರಗತಿ ಶಿಕ್ಷಕರು ಸಹಪಾಠಿಗಳ ಅಭಿಪ್ರಾಯ ಪಡೆಯುವುದು. ಇದರಲ್ಲಿ A, B, C ಗ್ರೇಡ್ ನೀಡಬೇಕು.

   ಈ ಎರಡು ವಿಷಯಗಳ ಸರಾಸರಿ ಗ್ರೇಡ್ ನ್ನು ಲೆಕ್ಕ ಹಾಕಿ ಶ್ರೇಣಿ ನಿಗದಿಪಡಿಸಬೇಕು.

2. ಘನ ತ್ಯಾಜ್ಯ ನಿರ್ವಹಣೆ, ಮನೆಯಲ್ಲಿ ತ್ಯಾಜ್ಯ ವಿಂಗಡಣೆ ಮತ್ತು ಸಂಗ್ರಹಣೆ, ಪ್ಲಾಸ್ಟಿಕ್ ತ್ಯಾಜ್ಯ ನಿಗದಿತ ವಿಲೇವಾರಿ ಇವುಗಳನ್ನು ಸಾಮಾಜಿಕ ಉಪಯುಕ್ತ ಉತ್ಪಾದನಾ ಕೆಲಸದಡಿ ಮೌಲ್ಯಮಾಪನ ಮಾಡುವುದು.

ವಿದ್ಯಾರ್ಥಿಗಳಿಗೆ ಉಲ್ಲೇಖ – 1 ರ ಸುತ್ತೋಲೆಯಂತೆ ಕ್ರಮ ವಹಿಸಬೇಕು. ಮೌಲ್ಯಮಾಪನ ಮಾಡುವಾಗ ವಿದ್ಯಾರ್ಥಿಗಳು ಸಂಗ್ರಹಿಸಿದ ಕಸದ ಪ್ರಮಾಣದ ಮೇಲೆ ಗ್ರೇಡ್ ನೀಡಬೇಕು.

1. ಈ ಹಂತದಲ್ಲಿ ಹಳ್ಳಿ ಮತ್ತು ನಗರ ಅಥವಾ ಅರೆ ಪಟ್ಟಣದ ವಿದ್ಯಾರ್ಥಿಗಳನ್ನು ಪ್ರತ್ಯೇಕ ಪ್ರತ್ಯೇಕ ಪರಿಗಣಿಸಬೇಕು. ಕಸ ವಿಂಗಡಣೆಯಲ್ಲಿ ತೋರಿದ ಪ್ರಾವೀಣ್ಯತೆಗೆ ಗ್ರೇಡ್ ನೀಡಬೇಕು.
2. ಕಸ ವಿಲೇವಾರಿ ಬಗ್ಗೆ ಚಿತ್ರ ಬರೆಯುವ ಚಟುವಟಿಕೆ ಏರ್ಪಡಿಸಿ ಗ್ರೇಡ್ ನೀಡಬೇಕು.
3. ಈ ಮೂರು ಚಟುವಟಿಕೆಗಳ ಸರಾಸರಿ ಗ್ರೇಡ್‌ನ್ನು ಮೌಲ್ಯಮಾಪನ ಅಂಕವಾಗಿ ಬಳಸಬೇಕು.

   1 , 2 ಮತ್ತು 3 ರ ಸರಾಸರಿ ಗ್ರೇಡ್‌ನ್ನು ನಿರ್ಧರಿಸಬೇಕು.

3. ಪೈಪ್ ಕಾಂಪೋಸ್ಟ್ ಅಳವಡಿಕೆ , ದ್ರವ್ಯ ತ್ಯಾಜ್ಯ ನಿರ್ವಹಣೆ, ತರಗತಿ/ಶಾಲಾ ಪರಿಸರ ಸ್ವಚ್ಛತೆ ಮತ್ತು ಕೈ ತೋಟ ನಿರ್ವಹಣೆಯನ್ನು ದೈಹಿಕ ಮತ್ತು ಆರೋಗ್ಯ ಶಿಕ್ಷಣ ಚಟುವಟಿಕೆಗೆ ಬಳಸಬೇಕು.

ಮನೆಯಲ್ಲಿ/ ಅಕ್ಷರ ದಾಸೋಹದ ನಂತರ ಉಳಿಯುವ ಹಸಿ ಕಸ ನಿರ್ವಹಣೆ ಮತ್ತು ದ್ರವ ತ್ಯಾಜ್ಯ ನಿರ್ವಹಣೆಯ ಬಗ್ಗೆ ಚಟುವಟಿಕೆ ಏರ್ಪಡಿಸುವುದು. ಪೈಪ್ ಕಾಂಪೋಸ್ಟ್ ತಯಾರಿಕೆ, ಅದರಿಂದ ಉತ್ಪಾದನೆಯಾದ ಕಾಂಪೋಸ್ಟ್‌ನ ಪ್ರಮಾಣ ಮತ್ತು ಅದರ ಬಳಕೆಯ ಆಧಾರದ ಮೇಲೆ ಗ್ರೇಡ್ ನಿಗದಿಪಡಿಸುವುದು.

1. ವಿದ್ಯಾರ್ಥಿಗಳ ತಂಡದಲ್ಲಿ ತರಗತಿ ಮತ್ತು ಶಾಲಾ ಆವರಣ ಸ್ವಚ್ಛತೆಗಾಗಿ ವಾರಕ್ಕೊಂದು ತಂಡಕ್ಕೆ ವಹಿಸುವುದು. ಇದರ ನಿರ್ವಹಣೆಯನ್ನು ಸಾಂದರ್ಭಿಕ ವಹಿಯಲ್ಲಿ ನಮೂದಿಸುವುದು. ಇದಕ್ಕೆ ಗ್ರೇಡ್‌ನ್ನು ನೀಡುವುದು.
2. ತರಗತಿಯ ಕೈ ತೋಟ ನಿರ್ವಹಣೆ ಮತ್ತು ಅದರಲ್ಲಿ ಪೈಪ್ ಕಾಂಪೋಸ್ಟ್ ಬಳಕೆಯನ್ನು ತಂಡದಲ್ಲಿ ನಿರ್ವಹಿಸುವಂತೆ ತಿಳಿಸಿ ಇದಕ್ಕೆ ಗ್ರೇಡ್ ನೀಡುವುದು.
3. ಈ ಮೂರು ವಿಷಯಗಳ ಸರಾಸರಿ ಗ್ರೇಡ್ ನ್ನು ಈ ವಿಭಾಗದ ಮೌಲ್ಯಮಾಪನದ ಅಂಕವಾಗಿ ಬಳಸುವುದು.

   ಈ ಮೂರು ಅಂಶಗಳನ್ನು ಮೊದಲನೆಯ ಅರ್ಧವಾರ್ಷಿಕ ಅವಧಿಯ 3 ವಿಷಯಗಳ ಮೌಲ್ಯಮಾಪನಕ್ಕೆ ಬಳಸಿಕೊಳ್ಳುವುದು.

ಈ ವಿಷಯಗಳಿಗೆ ಹೆಚ್ಚಿನ ಮಾಹಿತಿಗಾಗಿ ಶ್ರೀ ನಾಗರಾಜ ವಿಷಯ ಪರಿವೀಕ್ಷಕರು, ವೃತ್ತಿ ಶಿಕ್ಷಣ (ಮೊಬೈಲ್ ಸಂಖ್ಯೆ: 9449964968) ಇವರನ್ನು ಸಂಪರ್ಕಿಸುವುದು.

ಉಪನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ,
ಉಡುಪಿ ಜಿಲ್ಲೆ, ಉಡುಪಿ

ರಿಗೆ,

1. ಕ್ಷೇತ್ರ ಶಿಕ್ಷಣಾಧಿಕಾರಿಗಳು ಬ್ರಹ್ಮಾವರ, ಬೈಂದೂರು, ಕಾರ್ಕಳ, ಕುಂದಾಪುರ, ಉಡುಪಿ ವಲಯ ಇವರಿಗೆ ಸೂಕ್ತ ಕ್ರಮಕ್ಕಾಗಿ
2. ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು ಬ್ರಹ್ಮಾವರ, ಬೈಂದೂರು, ಕಾರ್ಕಳ, ಕುಂದಾಪುರ, ಉಡುಪಿ

ಪ್ರತಿ:

1. ಮಾನ್ಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಉಡುಪಿ ಇವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.
2. ಕಛೇರಿ ಪ್ರತಿ